ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು

ಸಿ.ಸಿ. ಸಂಖ್ಯೆ 1738/2018

ಫಿರ್ಯಾದುದಾರರು - ರಾಜ್ಯದ ಪರ ಬೊಮ್ಮನಹಳ್ಳಿ ಪೊಲೀಸ್ ಠಾಣೆ

ಬೆಂಗಳೂರು

-ವಿರುದ್ಧ-

ಆರೋಪಿತರು -

1. ಮೊಹಮ್ಮದ್ ಸಲ್ಮಾನ್ ಉರ್ಫ್ ಸಲ್ಮಾನ್ - ಪ್ರತ್ಯೇಕಿಸಲಾಗಿದೆ
2. ಮೀನ್ ಅಕ್ರಮ್ - ಪ್ರತ್ಯೇಕಿಸಲಾಗಿದೆ
3. ಮಂಜುನಾಥ ಉರ್ಫ್ ಮಂಜು ಉರ್ಫ್ ಹಾಟ್ ಬಾಯ್ ಮಂಜ ಉರ್ಫ್ ಆಟೋ ಮಂಜ ಬಿನ್ ದಿ.ಮಂಜಯ್ಯ, 38 ವರ್ಷ,

**ದೋಷಾರೋಪಣೆ**

ಪಾಟೀಲ ವೀರನಗೌಡ ಎಸ್. ಬಿ.ಕಾಂ. ಎಲ್.ಎಲ್. ಎಂ., ಬೆಂಗಳೂರು ನಗರದ ಮುಖ್ಯ ಮಹಾನಗರ ದಂಡಾಧಿಕಾರಿ ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕ 08-08-2017 ರಂದು 1.00 ರಿಂದ 7.00 ರ ಗಂಟೆಯ ನಡುವೆ 1 ರಿಂದ 3 ನೇ ಆರೋಪಿಗಳಾದ ನೀವು ಕಳ್ಳತನ ಮಾಡುವ ಉದ್ದೇಶದಿಂದ ಬೆಂಗಳೂರು ನಗರ, ಬೊಮ್ಮನಹಳ್ಳಿ, ರೂಪೇನ ಅಗ್ರಹಾರ, ಎನ್.ಜಿ.ಆರ್. ಲೇಔಟ್ 4 ನೇ ಕ್ರಾಸ್‌ನಲ್ಲಿರುವ ಶ್ರೀಶಾ ಅಪಾರ್ಟ್ ಮೆಂಟ್ 1 ನೇ ಮಹಡಿಯಲ್ಲಿರುವ ಪ್ಲಾಟ್ ನಂ-40 ರ ಚಾಸಾ 1 ಸುನೀಲ್ ಕುಮಾರ್ ಸಿಂಗ್ ರವರ ವಾಸದ ಮನೆಯ ಕಿಟಕಿಯ ಮೂಲಕ ಕೈ ಹಾಕಿ ಹಿಂಭಾಗಿಲನ್ನು ತೆರೆದು ಮನೆಯ ಒಳಗೆ ಪ್ರವೇಶಿಸಿ, ಚಾಸಾ 1 ರವರಿಗೆ ಸಂಬಂಧಿಸಿದ ಸುಮಾರು ₹50,000/- ಬೆಲೆ ಬಾಳುವ ಐಫೋನ್-6, ಎಸ್.ಸ್ಯಾಮ್‌ಸಂಗ್ ಮೊಬೈಲ್ ಫೋನ್, ಪಾನಾಸೋನಿಕ್ ಮೆಗಾ ಮೊಬೈಲ್ ಫೋನ್, ಡಿ.ಎಲ್., ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಡೆಬಿಟ್ ಕಾರ್ಡ್, ನಗದು ಹಣ

₹22,000/- ಗಳಿದ್ದ ಪರ್ಸ್,  ಚಾಸಾ.2 ಮಿಥುನ್ ಕುಮಾರ್ ರವರಿಗೆ ಸೇರಿದ ಸುಮಾರು ₹10,000/- ಬೆಲೆ ಬಾಳುವ ಮೋಟೋರೋಲಾ ಮೊಬೈಲ್ ಫೋನ್, ಆಧಾರ್ ಕಾರ್ಡ್, ಪಾನ್ ಕಾರ್ಡ್, ವೋಟರ್ ಐಡಿ, ನಗದು ₹8,000/- ಗಳಿದ್ದ ಪರ್ಸ್ ಚಾಸಾ 3 ಆಶೀಶ್ ರವರಿಗೆ ಸಂಬಂಧಿಸಿದ ಸುಮಾರು ₹50,000/- ಬೆಲೆ ಬಾಳುವ ಓನ್ ಪ್ಲಸ್ ಟೂ ಮೊಬೈಲ್ ಫೋನ್, ಮೈಕ್ರೊಮ್ಯಾಕ್ಸ್ ಮೊಬೈಲ್ ಫೋನ್, ಹೆಚ್.ಪಿ. ಲ್ಯಾಪ್ ಟಾಪ್ ಹಾಗೂ ಬಟ್ಟೆಗಳಿದ್ದ ಟ್ರಾಲಿ ಬ್ಯಾಗ್ ಹಾಗೂ ಚಾಸಾ 4 ದಿಪಾಂಕರ್ ಸೊಡೆಲ್ ರವರಿಗೆ ಸೇರಿದ ಸುಮಾರು ₹1,000/- ಬೆಲೆ ಬಾಳುವ ಲ್ಯಾಪ್‌ಟಾಪ್ ಬ್ಯಾಗ್, ಚಾರ್ಜರ್, ಕಂಪನಿ ಐ.ಡಿ. ಕಾರ್ಡ್, ಐ.ಬಿ.ಎಂ. ಕಂಪನಿಯ ಆರ್.ಎಸ್.ಎ. ಟೋಕನ್ ಗಳನ್ನು ಕಳವು ಮಾಡಿಕೊಂಡು ಹೋಗಿ ಭಾ. ದಂ. ಸಂ. ಕಲಂ 457, 380 ರಡಿ ದಂಡನೀಯವಾದ ಅಪರಾಧ ಎಸಗಿದ್ದು ನನ್ನ ಸಂಜ್ಞೆಯಲ್ಲಿರುತ್ತದೆ.

ಆದ್ದರಿಂದ ಆರೋಪಿತರಾದ ನೀವು ಮೇಲ್ಕಂಡ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಪಾಟೀಲ ವೀರನಗೌಡ ಎಸ್.)
ಮುಖ್ಯ ಮಹಾನಗ ದಂಡಧಿಕಾರಿ,
ಬೆಂಗಳೂರು ನಗರ.

ದಿನಾಂಕ 25-07-2022